# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 450 |
| ಸದಸ್ಯರ ಹೆಸರು | : | ಶ್ರೀ ಎಸ್. ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 10-07-2023 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸಾರ್ವಜನಿಕರಿಗೆ 2023 ಮೇ ಮತ್ತು ಜೂನ್ ತಿಂಗಳಿನ ವಿದ್ಯುತ್ ಬಿಲ್‌ಗಳಲ್ಲಿ ಹೆಚ್ಚಿನ ಮೊತ್ತ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಆದೇಶ ದಿನಾಂಕ: 12.05.2023 ರ ಪ್ರಕಾರ ದಿನಾಂಕ: 01.04.2023 ರಿಂದ ಅಥವಾ ತದನಂತರದ ಮೊದಲ ಮಾಪಕ ಓದುವ ದಿನಾಂಕದಿಂದ ಬಳಸುವ ವಿದ್ಯುತ್‌ಗೆ ದರ ಪರಿಷ್ಕರಿಸಲಾಗಿದೆ. ಇದರನ್ವಯ ಪರಿಷ್ಕೃತ ದರವು ದಿನಾಂಕ:01.04.2023 ರಿಂದ ಪೂರ್ವಾನ್ವಯವಾಗಿರುವುದರಿಂದ, ಜೂನ್-2023 ತಿಂಗಳ ಬಿಲ್ಲಿನಲ್ಲಿ ಏಪ್ರಿಲ್-23 ಹಾಗೂ ಮೇ-23 ತಿಂಗಳ ಬಾಕಿಯನ್ನು ಸಂಗ್ರಹ ಮಾಡಲಾಗಿದೆ.<br><br>ಮುಂದುವರೆದು 29.12.2022 ರಂದು CERC ಪರಿಚಯಿಸಿದ ಇಂಧನ ವಿದ್ಯುತ್ ಖರೀದಿ ವೆಚ್ಚದ ಹೊಂದಾಣಿಕೆಯನ್ನು, KERC 23.02.2023 ರಂದು ಅಧಿಸೂಚನೆ ಹೊರಡಿಸಿದ್ದು, ಈ ಅಧಿಸೂಚನೆಯು ಕೆಇಆರ್‌ಸಿಯಿಂದ ಅನುಮೋದನೆಗೊಂಡ ನಂತರ ಈ ಹಿಂದೆ ತ್ರೈಮಾಸಿಕ ಆಧಾರದ ಮೇಲೆ ಸಂಗ್ರಹಿಸುತ್ತಿದ್ದ ಹೆಚ್ಚುವರಿ ವಿದ್ಯುತ್ ಖರೀದಿ ವೆಚ್ಚವನ್ನು ಮಾಸಿಕವಾಗಿ ಸಂಗ್ರಹ ಮಾಡಲು (Automatic pass through) ESCOMS ಗೆ ಕಡ್ಡಾಯಗೊಳಿಸಲಾಗಿತ್ತು. ಈ ಕಾರಣ ಮಾರ್ಚ್ ತಿಂಗಳಿನಿಂದಲೇ ಜಾರಿಗೆ ಬರುವಂತೆ ಅನುಷ್ಠಾನಗೊಳಿಸದೇ ಜೂನ್ ತಿಂಗಳಿನ ಬಿಲ್ಲಿನಲ್ಲಿ ಸೇರಿಸಲಾಗಿರುತ್ತದೆ. ಕೆ.ಇ.ಆರ್.ಸಿ ಅನುಮೋದನೆ ನೀಡಿರುವ ದರಕ್ಕಿಂತಲೂ Actual monthly power purchase cost ಕಡಿಮೆಯಾದ ತಿಂಗಳಿನಿಂದ FPPCA (Fuel & Power Purchase cost adjustment) ಇರುವುದಿಲ್ಲ. |
| ಆ) | ಬಂದಿದ್ದಲ್ಲಿ, ಈ ರೀತಿ ಗ್ರಾಹಕರಿಗೆ ವಿದ್ಯುತ್ ದರವನ್ನು ಹೆಚ್ಚಿಸಿರುವುದರಿಂದ ಬಡ ವರ್ಗದ ಜನರಿಗೆ ಹಾಗೂ ರೈತಾಪಿ ವರ್ಗದ ಜನರಿಗೆ ತುಂಬಾ ತೊಂದರೆಯಾಗಿರುವುದರಿಂದ ಸರ್ಕಾರ ಈ ವಿದ್ಯುತ್ ಬಿಲ್ಲನ್ನು ಕಡಿಮೆ ಮಾಡಲು ಯಾವ ಕ್ರಮವನ್ನು ಕೈಗೊಂಡಿದೆ? | ವಿದ್ಯುತ್ ದರವನ್ನು ಹೆಚ್ಚಿಸಲು ಕಾರಣವಾಗುವ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ:<br><br>1. ಆಮದು ಕಲ್ಲಿದ್ದಲನ್ನು ದೇಸಿಯ ಕಲ್ಲಿದ್ದಲಿನೊಂದಿಗೆ ಮಿಶ್ರಣ ಮಾಡಲು ಭಾರತ ಸರ್ಕಾರವು ನೀಡಿದ ಆದೇಶದಿಂದ ವಿದ್ಯುತ್ ವೆಚ್ಚ ಹೆಚ್ಚಾಗುವುದು.<br>2. UPCL ಗೆ ಸಂಬಂಧಿಸಿದಂತೆ ನ್ಯಾಯಾಲಯವು ನೀಡಿದ ತೀರ್ಪಿನಿಂದ ವಿದ್ಯುತ್ ವೆಚ್ಚವು ಹೆಚ್ಚಾಗುವುದು.<br>3. ಆಮದು ಕಲ್ಲಿದ್ದಲ್ಲಿನ ಬೆಲೆ ಏರಿಕೆಯಿಂದಾಗಿ ವಿದ್ಯುತ್ ವೆಚ್ಚವು ಹೆಚ್ಚಾಗುವುದು.<br>4. ದೀರ್ಘಕಾಲದ ವಿದ್ಯುತ್ ಖರೀದಿ ಒಪ್ಪಂದಗಳಿಂದಾಗಿ ವಿದ್ಯುತ್ ಸರಬರಾಜು ಕಂಪನಿಗಳು ಉಷ್ಣಕೇಂದ್ರಗಳಿಗೆ ಪ್ರತಿ ತಿಂಗಳು ನಿಗದಿತ ವೆಚ್ಚವನ್ನು ಭರಿಸಬೇಕಾಗುತ್ತದೆ. |

...2

| | | |
|---|---|---|
| | | 5. ಇದಲ್ಲದೆ, ನಿರ್ವಹಣಾ ವೆಚ್ಚ ಸಹ ಜಕಾತಿ ಪರಿಷ್ಕರಣೆಯಲ್ಲಿ ಒಳಗೊಂಡಿರುತ್ತದೆ.<br>6. ವಿದ್ಯುತ್ ಖರೀದಿ ವೆಚ್ಚ ಮತ್ತು ವಿದ್ಯುತ್ ಮಾರಾಟದಿಂದ ಬರುತ್ತಿರುವ ವ್ಯತ್ಯಾಸವು ಹೆಚ್ಚಾಗುತ್ತಿದ್ದು, ವಿದ್ಯುತ್ ದರ ಏರಿಕೆಯು ಅನಿವಾರ್ಯವಾಗಿರುತ್ತದೆ.<br>ಮುಂದುವರೆದು, ದರ ಪರಿಷ್ಕರಣೆಯು KERC ವ್ಯಾಪ್ತಿಗೆ ಒಳಪಟ್ಟಿರುತ್ತದೆ. |

ಸಂಖ್ಯೆ: ಎನರ್ಜಿ 144 ಇಬಿಎಸ್ 2023

(ಕೆ.ಜೆ.ಜಾರ್ಜ್)
ಇಂಧನ ಸಚಿವರು